ತಣ್ಣಗಿದ್ದ ನೆಲದ ಮೇಲೆ ನಿದ್ದೆ ಹೋಗಿತ್ತು. ಅದರ ಮುದ್ದು ಮುಖ ನೋಡಿ ಇದನ್ನೆಂತ ಕೊಡೋದು, ಎಂದು ತಲೆ ಚಚ್ಚಿಕೊಂಡವಳು. ಅದು ಏಳುವ ಮೊದಲು ಎಲ್ಲ ಕ್ಲೀನ್ ಮಾಡಿ ಬಿಡೋಣ, ಇಲ್ಲೇ ನಿಂತಿದ್ದರೆ ಎದ್ದು ಬಿಟ್ಟೀತು ಎಂದು ಹೆದರಿ ಹೊರ ಬಂದಳು.

ಎರಡನೆಯ ದಿನಕ್ಕೆ ಅದರ ಆಟಕ್ಕೆ ಮನೆ ಧ್ವಂಸವಾಗಿತ್ತು. ನೆಲ ಒರೆಸುವ ಕೋಲನ್ನು ತುದಿಯಲ್ಲಿ ಕಚ್ಚಿ ಓಡಿ ಬರುತ್ತಿತ್ತು. ಒಂದು ತುದಿಯಲ್ಲಿದ್ದ ಬಟ್ಟೆಯನ್ನು ಕಚ್ಚಿ ಹರಿಯುವ ರಭಸಕ್ಕೆ ಇನ್ನೊಂದು ತುದಿ ಯದ್ವಾತದ್ವಾ ಬೀಸುತ್ತಿತ್ತು. ಕೋಲನ್ನು ಕಿತ್ತುಕೊಳ್ಳಲು ಬಂದವಳ ತಲೆಗೇ ಏಟು ಬಿದ್ದು, ಪ್ರಿಯಾಗೆ ಇನ್ನಷ್ಟು ಸಿಟ್ಟು ನೆತ್ತಿಗೇರಿತು. 'ಡಾಗ್ ಟ್ರೈನರ್ ನಿಯರ್ ಮಿ' ಎಂದು ಹುಡುಕಿ ಯಾರಿಗೋ ಕಾಲ್ ಮಾಡಿದಳು.

ಆತ ಯಾರೋ ಒಳ್ಳೆಯವನು. ಮನೆಗೇ ಬಂದು ನಾಯಿಮರಿಯನ್ನ ನೋಡಿ ಒಂದಿಷ್ಟು ಸಲಹೆ ಸೂಚನೆ ಕೊಟ್ಟ. 'ಮೇಡಂ ನೀವು ನಾಯಿಯನ್ನು ಎಷ್ಟು ನಾಜೂಕಾಗಿ ನೋಡಿಕೊಂಡು ಮುದ್ದು ಮಾಡ್ತೀರೋ ಅಷ್ಟು ಪಾಪದ ನಾಯಿಯಾಗ್ತದೆ ಅದು' ಎಂದು ನಾಯಿಯ ಹೊಟ್ಟೆಯನ್ನು ನೇವರಿಸುತ್ತಾ ಹೇಳಿದ. ಅಷ್ಟು ಹೊತ್ತೂ ದಾಂಧಲೆ ಮಾಡಿದ ಸ್ನೂಪಿ ಅವನ ಮುಂದೆ ವಿಧೇಯ ವಿದ್ಯಾರ್ಥಿಯ ಹಾಗೆ ಕೂತಿತ್ತು.

ಪ್ರಶಾಂತ ಬಂದ ಮಾರನೆಯ ದಿನ ನಾಯಿನ ಕೊಟ್ಟು ಬಿಡೋಣ ಬಿಡು ಅಂದ. ನೋಡೋಣ ಇನ್ನೂ ಒಂದೆರಡು ದಿನ ಎಂದು ಸುಮ್ಮನಾಗಿಸಿದಳು ಪ್ರಿಯಾ. ಮುಂದಿನ ಇಡೀ ವಾರ ಅವಳು ಆಫೀಸಲ್ಲಿದ್ದಾಗ, ಬಿಡುವಾದಾಗ ಯುಟ್ಯೂಬಲ್ಲಿ ಹೌ ಟು ಟ್ರೈನ್ ಹಸ್ಕಿ ಪಪ್ಪಿ ಎಂದು ಹುಡುಕಿದ್ದೇ ಹುಡುಕಿದ್ದು. ಅದಕ್ಕೆ ಬೇಕಾದ ಟ್ರೀಟ್‌ಗಳು, ಬಿಸ್ಕೆಟ್‌ಗಳನ್ನು ತಂದಿದ್ದೂ ಆಯಿತು.

ಪ್ರಶಾಂತ ನಾಯಿಗೆ ಶಿಸ್ತು ಕಲಿಸುತ್ತೇನೆಂದು ನಾಲ್ಕು ಸಲ ಸಿಟ್ ಎಂದ. ಅದು ಕೇಳದೇ ಕಚ್ಚಲಾರಂಭಿಸಿತು. ಅವನ ತಾಳ್ಮೆ ಎಷ್ಟೆಂದು ಪ್ರಿಯಾಗೆ ಗೊತ್ತಿತ್ತು. ಬಿಡು ಪ್ರಶಾಂತ್, ಸಾಕು ಎಂದು ಅಡುಗೆ ಮನೆಯಿಂದ ಆಕೆ ಕೂಗುವಷ್ಟರಲ್ಲಿ ಅವನು ನಾಯಿಗೆ ಬಾರಿಸಿಯಾಗಿತ್ತು. ಅವಳು ಒಳಗಿಂದ ಓಡಿಬಂದ ಕೂಡಲೇ ನಾಯಿಮರಿ ಅವಳ ಹಿಂದೆ ಅಡಗಿ ಕೂತು ಅವಳ ಕಾಲು ನೆಕ್ಕಲಾರಂಭಿಸಿತ್ತು. ಬಗ್ಗಿ ಮೊಣಕಾಲೂರಿ ಕೂತು 'ಹೊಡೆದ್ರಾ ನಿಂಗೆ' ಅಂದವಳಿಗೆ ನಾಯಿಮರಿಯ ಕಣ್ಣಲ್ಲಿ ನೀರು ನೋಡಿ ಸಂಕಟವಾಗಿತ್ತು. ಅಯ್ಯೋ ಕೂಸೇ ಎಂದು ತಬ್ಬಿ ತಲೆ ಸವರಿದಳು.

'ನೀನೇ ದೂರ ಆಗ್ತಿರೋ ಹೊತ್ತಿಗೆ ಇದ್ಯಾವ ನಾಯಿನ ಗಂಟು ಹಾಕಿದೆ ಪುಣ್ಯಾತ್ಮ' ಎಂದು ಗೊಣಗಿಕೊಂಡು ನಾಯಿಗೆ ಟ್ರೀಟ್ ಕೊಡುತ್ತಾ ಕಮ್, ಗೋ, ಸಿಟ್, ಸ್ಟಾಂಡ್, ಟರ್ನ್ ಎಲ್ಲವನ್ನೂ ಹೇಳಿಕೊಡಲು ಶುರು ಮಾಡಿದಳು. ಅದು ಜಾಣಮಗುವಿನ ಹಾಗೆ ಬೇಗ ಬೇಗ ಕಲಿತು ಆಮೇಲೆ ಅವಳ ಕೈಯನ್ನು ಕಚ್ಚುತ್ತಾ ಕೂರುತ್ತಿತ್ತು. ಅವಳೂ ಒಮ್ಮೊಮ್ಮೆ ಅದೇನೋ ಥೆರಪಿ ಅನ್ನುವ ಹಾಗೆ ಕೂತು ಬಿಡುತ್ತಿದ್ದಳು. ಬರುಬರುತ್ತಾ ಸ್ನೂಪಿಯನ್ನು ಬೈದುಕೊಂಡು, ಗೊಣಗಿಕೊಂಡು ಮುದ್ದಾಡಿಕೊಂಡು ಕೆಲಸ ಮಾಡುವುದು ಅವಳ ದಿನಚರಿಗೆ ಸೇರ್ಪಡೆಯಾಯಿತು.

* * *

'ಮುಂದಿನ ವಾರ ನಿಮ್ಮ ಕೊನೆ ಹಿಯರಿಂಗ್ ಇದೆ ಮೇಡಂ, ಪೂರ್ತಿ ಅಮೌಂಟ್ ಅವತ್ತು ಕ್ಲಿಯರ್ ಮಾಡ್ಬಿಡಿ' ಲಾಯರ್ ಹೇಳಿದ್ದರು.

'ನಿಂಗೇನಾದರೂ ಅಡ್ಜಸ್ಟ್ ಮಾಡೋಕಾಗತ್ತಾ

